KAUK010007802019

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 10/2019**

**ದೋ.ಸಾ. : 3 ಫ್ರಾ.ಸಾ. : 2**

| | | |
|---|---|---|
| ಸಾಕ್ಷಿಯ ಹೆಸರು | : | ಸೂರಜ್ ಕೃಷ್ಣಮೂರ್ತಿ ಕೇಳಸ್ಕರ |
| ತಂದೆಯ ಹೆಸರು | : | ಕೃಷ್ಣಮೂರ್ತಿ ಕೇಳಸ್ಕರ |
| ವಯಸ್ಸು | : | 32 ವರ್ಷ |
| ಕೆಲಸ | : | ನವಯುಗ ಕಂಪನಿಯಲ್ಲಿ ಕೆಲಸ |
| ಹಾಲಿ ವಾಸ | : | ಶಿರವಾಡ, ಕಾರವಾರ |
| ಖಾಯಂ ವಾಸ | : | ಮೆಕೇರಿ, ಕಾರವಾರ |

**ದಿನಾಂಕಃ 31-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ದಿನಾಂಕಃ 23-10-2018 ರಂದು ನನ್ನ ಸ್ನೇಹಿತನ ಕೆಲಸದ ನಿಮಿತ್ತ ಕಾರವಾರ ಶಹರ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಆ ದಿನ ಪೋಲೀಸರು ನನಗೆ ಪಂಚನಾಮೆಗೆ ಬರುವಂತೆ ನೋಟೀಸ್ ನೀಡಿ, ನನ್ನನ್ನು ಪೋಲೀಸ್ ನಿರಿಕ್ಷಕರ ಕ್ಯಾಬೀನ್ ಗೆ ಕರೆದರು. ಅಲ್ಲಿ ಮುಸ್ತಾಕ್ ಅಹಮ್ಮದ್ ಮತ್ತು ಶಫಿ ಅನ್ವರ್ ಇದ್ದರು. ಅದೇ ರೀತಿ ಚಾಸಾ 2 ಪ್ರವೀಣ್ ರವರು ಸಹ ಠಾಣೆಯಲ್ಲಿದ್ದರು ಮತ್ತು ಮೃತ ಪ್ರೇಮಕುಮಾರನ ಸಂಬಂಧಿಕರು ಸಹ ಇದ್ದರು. ನಮ್ಮ ಸಮಕ್ಷಮ ಮುಸ್ತಾಕ್ ಅಹಮ್ಮದ್ ಮತ್ತು ಶಫಿ ಅನ್ವರ್ ರವರು ಪ್ರೇಮಕುಮಾರನನ್ನು ಕೊಲೆ ಮಾಡಿದ ಸ್ಥಳ, ಶವ ಎಸೆದ ಸ್ಥಳ, ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳ ಹಾಗೂ ಶಫಿ ಬೈಕ್ ಇಟ್ಟಿದ್ದ ಸ್ಥಳ ಹಾಗೂ ಮುಸ್ತಾಕ್ ಅಹಮ್ಮದ್ ಕಾರು ನಿಲ್ಲಿಸಿದ ಸ್ಥಳ ತೋರಿಸುತ್ತೇವೆ ಎಂದು ಹೇಳಿದರು. ಸಾಕ್ಷಿಯು ಆ ದಿನ ತನಗೆ ಪೋಲೀಸರು ನೀಡಿದ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 10 ಎಂದು ಗುರುತಿಸಲಾಯಿತು.

2 ಮತ್ತು 3 ನೇ ಆರೋಪಿಗಳ ಹೇಳಿಕೆಯ ಮೇರೆಗೆ ಪೋಲೀಸರು ನನ್ನನ್ನು, ಮೃತ ಪ್ರೇಮಕುಮಾರನ ಸಂಬಂಧಿಕರನ್ನು ಹಾಗೂ ಚಾಸಾ 2 ರವರನ್ನು ಮತ್ತು 2 ಮತ್ತು 3 ನೇ ಆರೋಪಿತರನ್ನು ತಮ್ಮ ಜೀಪ್ ನಲ್ಲಿ ಹಾಗೂ ವ್ಯಾನ್ ನಲ್ಲಿ ಕರೆದುಕೊಂಡು ಬೆಳಿಗ್ಗೆ 9.45 ಕ್ಕೆ ಠಾಣೆ ಬಿಟ್ಟು ಉಳವಿ ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಅರಣ್ಯ ಇಲಾಖೆಯ ಚೆಕ್ ಪೋಸ್ಟ ಬಳಿ 2 ಮತ್ತು 3 ನೇ ಆರೋಪಿಗಳು ಗಾಡಿಯನ್ನು ನಿಲ್ಲಿಸುವಂತೆ ಹೇಳಿ, ನಮ್ಮನ್ನು ಕಾಲುದಾರಿಯಲ್ಲಿ ಸುಮಾರು 2 ½ ಕಿ.ಮೀ. ಅರಣ್ಯ ಪ್ರದೇಶದಲ್ಲಿ ಕರೆದುಕೊಂಡು ಹೋಗಿ, ಶವ ಎಸೆದ ಸ್ಥಳವನ್ನು ತೋರಿಸಿದ್ದು, ಅಲ್ಲಿ ಬೇರು ಕಿತ್ತ ಮರವಿದ್ದು, ಅದರ ಪಕ್ಕದಲ್ಲಿ ಒಂದು ಶವ ಬಿದ್ದಿದ್ದು, ಶವವನ್ನು ಮೃತ ಪ್ರೇಮಕುಮಾರನ ಅಣ್ಣ ಚಾಸಾ 19 ರವರು ಗುರುತಿಸಿರುತ್ತಾರೆ.

ನಾವು ಶವವನ್ನು ನೋಡಿದಾಗ, ಶವ ಮಲಗಿದ ಸ್ಥಿತಿಯಲ್ಲಿ ಬಿದ್ದಿತ್ತು, ಶವದ ಹತ್ತಿರ ಹರಿದ ಬನಿಯನ್ ಇದ್ದು, ಆ ಬನಿಯನ್ ಬಟ್ಟೆಗೆ ರಕ್ತದ ಕಲೆ ಇರುತ್ತದೆ, ಅದೇ ರೀತಿ ಒಂದು ಹರಿದ ಟೀ ಶರ್ಟ ಸಹ ಬಿದ್ದಿರುತ್ತದೆ. ನಂತರ, ಪೋಲೀಸರು ನಮ್ಮ ಸಮಕ್ಷಮ ಹರಿದ ಬನಿಯನ್ ಹಾಗೂ ಹರಿದ ಟೀ ಶರ್ಟನ್ನು ಜಪ್ತುಪಡಿಸಿಕೊಂಡು, ಅವುಗಳನ್ನು ಪ್ರತ್ಯೇಕವಾದ ಪ್ಲಾಸ್ಟಿಕ್ ಕವರ್ ಗಳಲ್ಲಿ ಹಾಕಿ, ಸೀಲ್ ಮಾಡಿ, ಅವುಗಳಿಗೆ ಚೀಟಿ ಅಂಟಿಸಿ, ನಮ್ಮ ರುಜುಗಳನ್ನು ಪಡೆದುಕೊಂಡರು. ಆ ನಂತರ ಪೋಲೀಸರು ಅಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿ, ನಕಾಶೆ ತಯಾರಿಸಿ, ಛಾಯಾಚಿತ್ರ ತೆಗೆದು, ಪಂಚನಾಮೆ ಹಾಗೂ ನಕಾಶೆಗೆ ನಮ್ಮ ರುಜುವನ್ನು ಪಡೆದುಕೊಂಡರು. ಆಗ ಸಮಯ ಮಧ್ಯಾಹ್ನ 12.15 ಗಂಟೆ ಆಗಿತ್ತು. ಶವ ಬಿದ್ದ ಸ್ಥಳದ ಪಂಚನಾಮೆ ಹಾಗೂ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ 11 ಎಂದು, ಸಾಕ್ಷಿಯ ರುಜುವನ್ನು ನಿಪಿ 11(ಎ) ಎಂದು, ನಕಾಶೆಯನ್ನು ನಿಪಿ 12 ಎಂದು, ಸಾಕ್ಷಿಯ ರುಜುವನ್ನು ನಿಪಿ 12(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 13 ಮತ್ತು 14 ಎಂದು ಗುರುತಿಸಲಾಯಿತು. ನಿಪಿ 13 ರಲ್ಲಿ ನಾನು ಇರುತ್ತೇನೆ.

ಆ ನಂತರ, ಮಧ್ಯಾಹ್ನ 12.30 ರಿಂದ 2.00 ಗಂಟೆಯವರೆಗೆ ಪೋಲೀಸರು ಶವ ಪಂಚನಾಮೆಯನ್ನು ಮಾಡಿ, ಛಾಯಾಚಿತ್ರ ತೆಗೆದರು. ನಾವು ಶವವನ್ನು ನೋಡಿದಾಗ, ಶವದ ತಲೆಯ ಹಿಂಬದಿಯಲ್ಲಿ ಕತ್ತಿಯಿಂದ ಹೊಡೆದ ಗಾಯಗಳಾಗಿದ್ದವು, ಬಲ ಕಿವಿ ಹರಿದು ಹೋಗಿತ್ತು, ಮೂಗು ಕತ್ತರಿಸಿ ಹೋಗಿದ್ದು ಮೂಗಿನ ಮೂಳೆ ಕಾಣುತ್ತಿತ್ತು, ಎರಡೂ ಕೈಗಳ

ಮೇಲೆ ಕತ್ತಿಯಿಂದ ಹೊಡೆದ ಗಾಯಗಳಾಗಿದ್ದು, ಮೂಳೆಗಳು ಕಾಣುತ್ತಿದ್ದವು, ಕುತ್ತಿಗೆಯ ಮೇಲೆ ಕತ್ತಿಯಿಂದ ಹೊಡೆದ ಗಾಯಗಳಾಗಿದ್ದವು, ಸೊಂಟದ ಮೇಲೆ ಕತ್ತಿಯಿಂದ ಹೊಡೆದ ಗಾಯಗಳಾಗಿದ್ದು ಮೂಳೆಗಳು ಕಾಣುತ್ತಿದ್ದವು, ಕಾಲಿನ ಮೇಲೆ ಕತ್ತಿಯಿಂದ ಹೊಡೆದ ಗಾಯಗಳಾಗಿದ್ದು ಅಲ್ಲಿಯೂ ಸಹ ಮೂಳೆಗಳು ಕಾಣುತ್ತಿದ್ದವು, ಕೆನ್ನೆಯ ಮೇಲೆ ಸಹ ಕತ್ತಿಯಿಂದ ಹೊಡೆದ ಗಾಯಗಳಾಗಿರುತ್ತವೆ, ಶವ ಕೊಳೆತ ಸ್ಥಿತಿಗೆ ತಲುಪಿದ್ದು ಸ್ವಲ್ಪ ಕಪ್ಪಾಗಿರುತ್ತದೆ, ಶವದ ಮೇಲೆ ಒಂದು ನಿಕ್ಕರ್, ಕೈಯಲ್ಲಿ ಕಪ್ಪು ದಾರ ಇರುತ್ತದೆ. ನಾವು ಶವವನ್ನು ನೋಡಿದಾಗ, ಕತ್ತಿಯಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ಕಂಡುಬಂದಿರುತ್ತದೆ. ಶವ ಪಂಚನಾಮೆಗೆ ನಾನು, ಚಾಸಾ 2 ರವರು ರುಜು ಮಾಡಿರುತ್ತೇವೆ. ಶವ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 15 ಎಂದು, ಸಾಕ್ಷಿಯ ರುಜುವನ್ನು ನಿಪಿ 15(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 16 ಮತ್ತು 17 ಎಂದು ಗುರುತಿಸಲಾಯಿತು. ನಿಪಿ 16 ರಲ್ಲಿ ನಾನು ಇರುತ್ತೇನೆ.

ಅನಂತರ 2 ಮತ್ತು 3 ನೇ ಆರೋಪಿಗಳು ನಮ್ಮನ್ನು ಹಾಗೂ ಪೋಲೀಸರನ್ನು ತಾವು ಮೃತ ಪ್ರೇಮಕುಮಾರನ ಕಣ್ಣಿಗೆ ಹಾಗೂ 2 ನೇ ಆರೋಪಿ ತನ್ನ ಕಣ್ಣಿಗೆ ಕಪ್ಪು ಬಣ್ಣದ ಬಟ್ಟೆ ಕಟ್ಟಿದ ಸ್ಥಳವನ್ನು ತೋರಿಸಿರುತ್ತಾರೆ. ಆ ಸ್ಥಳವು ಶವ ಬಿದ್ದ ಸ್ಥಳದಿಂದ 210 ಅಡಿಗಳ ದೂರ ಇರುತ್ತದೆ. ಅಲ್ಲಿ ಪೋಲೀಸರು ನಮ್ಮ ಸಮಕ್ಷಮ ಸ್ಥಳ ಪರಿಶೀಲಿಸಿದರು, ಅನಂತರ 2 ನೇ ಆರೋಪಿಯು ತನ್ನ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಿಕೊಂಡು, 2 ಮತ್ತು 3 ನೇ ಆರೋಪಿಗಳು ಮೃತ ಪ್ರೇಮಕುಮಾರನನ್ನು ಎರಡು ಕತ್ತಿಗಳಿಂದ ಕೊಲೆ ಮಾಡಿದ ಸ್ಥಳವನ್ನು ತೋರಿಸಿರುತ್ತಾರೆ. ಆ ಸ್ಥಳವು ಶವ ಬಿದ್ದ ಸ್ಥಳದಿಂದ 150 ಅಡಿ ದೂರದಲ್ಲಿ ಇರುತ್ತದೆ. ಅಲ್ಲಿ ಪೋಲೀಸರು ಸ್ಥಳ ಪರಿಶೀಲಿಸಿ, ಮಧ್ಯಾಹ್ನ 2.15 ರಿಂದ 2.45 ರವರೆಗೆ ಪಂಚನಾಮೆಯನ್ನು ಮಾಡಿ, ಛಾಯಾಚಿತ್ರ ತೆಗೆದು, ಪಂಚನಾಮೆಗೆ ನಮ್ಮ ರುಜುವನ್ನು ಪಡೆದುಕೊಂಡರು. ಕಣ್ಣಿಗೆ ಬಟ್ಟೆ ಕಟ್ಟಿ ಕೊಲೆ ಮಾಡಿದ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 18 ಎಂದು, ಸಾಕ್ಷಿಯ ರುಜುವನ್ನು ನಿಪಿ 18(ಎ) ಎಂದು ಗುರುತಿಸಲಾಯಿತು. ಸದ್ರಿ ಪಂಚನಾಮೆ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 19 ಮತ್ತು 20 ಎಂದು ಗುರುತಿಸಲಾಯಿತು. ಅವುಗಳಲ್ಲಿ ನಾನು ಇರುತ್ತೇನೆ.

ಅನಂತರ, 3 ನೇ ಆರೋಪಿಯು ಶವ ಬಿದ್ದ ಕಾಲುದಾರಿಯಿಂದ 240 ಅಡಿ ದೂರದಲ್ಲಿ ತನ್ನ ಬೈಕನ್ನು ನಿಲ್ಲಿಸಿದ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪೋಲೀಸರು ಸ್ಥಳ ಪರಿಶೀಲಿಸಿದ್ದು, ಸ್ಥಳದಲ್ಲಿ ಬೈಕ್ ನ ಚಕ್ರದ ಗುರುತುಗಳು ಕಂಡುಬಂದಿರುತ್ತದೆ. ಅಲ್ಲಿಯೂ ಸಹ ಪೋಲೀಸರು ಪಂಚನಾಮೆ ಮಾಡಿ, ಛಾಯಾಚಿತ್ರ ತೆಗೆದು, ನಮ್ಮ ರುಜುಗಳನ್ನು ಪಡೆದುಕೊಂಡರು. ಆಗ ಸಮಯ ಮಧ್ಯಾಹ್ನ 3.15 ರಿಂದ 3.45 ಗಂಟೆ ಆಗಿರುತ್ತದೆ. 3 ನೇ ಆರೋಪಿ ಬೈಕ್ ನಿಲ್ಲಿಸಿದ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 21 ಎಂದು, ಸಾಕ್ಷಿಯ ರುಜುವನ್ನು ನಿಪಿ 21(ಎ) ಎಂದು ಗುರುತಿಸಲಾಯಿತು. ಸದ್ರಿ ಪಂಚನಾಮೆ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 22 ಮತ್ತು 23 ಎಂದು ಗುರುತಿಸಲಾಯಿತು. ಅವುಗಳಲ್ಲಿ ನಾನು ಇರುತ್ತೇನೆ.

ಆ ನಂತರ, 2 ನೇ ಆರೋಪಿಯು ಮೃತ ಪ್ರೇಮಕುಮಾರನನ್ನು ಕಾರಿನಲ್ಲಿ ಕರೆದುಕೊಂಡು ಬಂದು ಕಾರನ್ನು ನಿಲ್ಲಿಸಿದ ಸ್ಥಳವನ್ನು ತೋರಿಸಿದ್ದು, ಆ ಸ್ಥಳವು ಚೆಕ್ ನಾಕಾದಿಂದ 170 ಮೀ. ದೂರದಲ್ಲಿ ಇರುತ್ತದೆ. ಅಲ್ಲಿಯೂ ಸಹ ಪೋಲೀಸರು ಪಂಚನಾಮೆ ಮಾಡಿ, ಛಾಯಾಚಿತ್ರ ತೆಗೆದು, ನಮ್ಮ ರುಜುಗಳನ್ನು ಪಡೆದುಕೊಂಡರು. ಆಗ ಸಮಯ ಸಂಜೆ 4.30 ಇಂದ 5.00 ಗಂಟೆ ಆಗಿರುತ್ತದೆ. 2 ನೇ ಆರೋಪಿ ಕಾರು ನಿಲ್ಲಿಸಿದ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 24 ಎಂದು, ಸಾಕ್ಷಿಯ ರುಜುವನ್ನು ನಿಪಿ 24(ಎ) ಎಂದು ಗುರುತಿಸಲಾಯಿತು. ಸದ್ರಿ ಪಂಚನಾಮೆ ಕಾಲಕ್ಕೆ ತೆಗೆದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 25 ಮತ್ತು 26 ಎಂದು ಗುರುತಿಸಲಾಯಿತು. ಅವುಗಳಲ್ಲಿ ನಾನು ಇರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು.)**

ಶವ ಬಿದ್ದ ಸ್ಥಳದ ಪಂಚನಾಮೆಯ ಕಾಲಕ್ಕೆ ಜಪ್ತುಪಡಿಸಿಕೊಂಡ ಹರಿದ ಬನಿಯನ್ ಹಾಗೂ ಹರಿದ ಟೀ ಶರ್ಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ. 8 ಮತ್ತು ಮು.ಮಾ. 9 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ರುಜುವನ್ನು ಮು.ಮಾ. 8(ಎ) ಮತ್ತು ಮು.ಮಾ. 9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಮೇಲೆ ಹೇಳಿದ ಎಲ್ಲಾ ಪಂಚನಾಮೆಗಳಿಗೆ 2 ಮತ್ತು 3 ನೇ ಆರೋಪಿಗಳು ಸಹ ರುಜು ಮಾಡಿರುತ್ತಾರೆ. ಸಾಕ್ಷಿಯು ಶವದ ಮೇಲೆ ಇದ್ದ ನಿಕ್ಕರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ. 10 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿಗಳ ಪರ ಶ್ರೀ ಎಲ್.ಎಸ್. ಕುರಿ ವಕೀಲರಿಂದಃ</u>**

ನ್ಯಾಯಾಲಯದ ಹೊರಗೆ ನಿಂತಿರುವ ವ್ಯಕ್ತಿಯ ಹೆಸರು ರಾಜೇಶ. ನಾನು ಆತನೊಂದಿಗೆ ಬಂದಿರುತ್ತೇನೆ ಎಂದರೆ ಸರಿ ಅಲ್ಲ. ನಾನು ಜೆ.ಓ.ಸಿ. ಅಟೋ ಮೊಬೈಲ್ ಓದಿರುತ್ತೇನೆ. ನನಗೆ ಮದುವೆಯಾಗಿರುವುದಿಲ್ಲ. ನಾನು ಶಿರವಾಡದಲ್ಲಿ ವಾಸ ಮಾಡುವ ಮನೆಯ ಪಕ್ಕ ಫಿರ್ಯಾದಿ ದಯಾನಂದನ ಮನೆ ಇರುತ್ತದೆ ಎಂದರೆ, ಸಾಕ್ಷಿಯು ಸ್ವಲ್ಪ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾವು ವಾಸವಿರುವ ಮನೆಯ ಓಣಿಯಲ್ಲಿ ಸುಮಾರು 10 ಮನೆಗಳಿರುತ್ತವೆ. ಫಿರ್ಯಾದಿ ದಯಾನಂದ ಅವರದು ಸ್ವಂತ ಮನೆ ಇರುತ್ತದೆ ಎಂದರೆ ಸರಿ. ಅವರ ಮನೆಯಲ್ಲಿ ಆತನ ಹೆಂಡತಿ ಹಾಗೂ ಆತನ ಮಕ್ಕಳು ಇರುತ್ತಾರೆ. ನಾನು ಈ ಪ್ರಕರಣದ ಪಂಚನಾಮೆಗೆ ಹೋಗುವ ಪೂರ್ವದಲ್ಲಿ ಫಿರ್ಯಾದಿಯ ಪರಿಚಯ ಇರುತ್ತದೆ ಎಂದರೆ ಸರಿ. ಅದೇ ರೀತಿ ಮೃತ ಪ್ರೇಮಕುಮಾರನ ಪರಿಚಯ ಸಹ ನನಗೆ ಇರುತ್ತದೆ, ಆತ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದನು ಎಂದು ನನಗೆ ತಿಳಿದಿರುತ್ತದೆ. ನನಗೆ ಫಿರ್ಯಾದಿಯ ಜೊತೆ ಒಳ್ಳೆಯ ಬಾಂಧವ್ಯ ಇರುತ್ತದೆ ಎಂದರೆ, ಸಾಕ್ಷಿಯು ಎಲ್ಲಿಯಾದರೂ ಒಮ್ಮೊಮ್ಮೆ ಸಿಕ್ಕಿದರೆ ಮಾತನಾಡಿಸುತ್ತಿದ್ದರು ಎಂದು ನುಡಿಯುತ್ತಾರೆ. ಮೃತ ಪ್ರೇಮಕುಮಾರ ಕಾಣೆಯಾದ ಬಗ್ಗೆ ನನಗೆ ಗೊತ್ತಿರಲಿಲ್ಲ, 3 ದಿನಗಳ ನಂತರ ಗೊತ್ತಾಯಿತು.

ದಿನಾಂಕಃ 23-10-2018 ರಂದು ನನ್ನ ಸ್ನೇಹಿತ ವಿಶ್ವನಾಥನ ಬೈಕ್ ಕಳುವಾದ ಬಗ್ಗೆ ದೂರು ನೀಡಲು ಠಾಣೆಗೆ ಹೋಗಿದ್ದೆವು, ಆದರೆ ದೂರು ನೀಡಲಿಲ್ಲ. ನಾನು ಬೇರೆಯವರ ಬಳಿ ಪೇಂಟಿಂಗ್ ಕೆಲಸ ಮಾಡುತ್ತಿದ್ದೆ. ದಿನಾಂಕಃ 23-10-2018 ರಂದು ನಾನು ಕೆಲಸಕ್ಕೆ ಹೋಗಿರಲಿಲ್ಲ, ಸ್ನೇಹಿತನ ಕೆಲಸದ ನಿಮಿತ್ತ ಠಾಣೆಗೆ ಹೋಗಬೇಕಾಗಿದ್ದರಿಂದ, ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ. ನನ್ನ ಸ್ನೇಹಿತ ವಿಶ್ವನಾಥ ಶಿರವಾಡದಲ್ಲಿ ವಾಸವಾಗಿದ್ದ. ಆದರೆ ಆತನ ಮನೆ ಎಲ್ಲಿತ್ತು ಎಂದು ನನಗೆ ಗೊತ್ತಿಲ್ಲ, ಅವನು ಕೆಲಸದ ಜಾಗದಲ್ಲಿ ಪರಿಚಯವಾಗಿದ್ದ. ನನ್ನ ಸ್ನೇಹಿತ ವಿಶ್ವನಾಥನ ಬೈಕ್ ರವೀಂದ್ರನಾಥ ಠ್ಯಾಗೋರ್ ಬೀಚ್ ನಲ್ಲಿ ಕಳುವಾಗಿರುತ್ತದೆ. ನಾವು ಆ ದಿನ

ಠಾಣೆಗೆ ಹೋದಾಗ, ನನ್ನ ಸ್ನೇಹಿತ ವಿಶ್ವನಾಥನ ತಾಯಿಗೆ ಹುಷಾರಿಲ್ಲ ಎಂದು ಕರೆ ಬಂದಿದ್ದರಿಂದ ದೂರು ನೀಡದೇ ಸ್ವಲ್ಪ ಹೊತ್ತು ಬಿಟ್ಟು ಬರುತ್ತೇನೆ ಎಂದು ಹೇಳಿ ಹೋಗಿರುತ್ತಾನೆ, ಆದ ಕಾರಣ ನಾನು ಅಲ್ಲಿಯೇ ಉಳಿದುಕೊಂಡಿದ್ದೆ. ಆಗ ಸಮಯ ಬೆಳಿಗ್ಗೆ 8.30 ಗಂಟೆ ಆಗಿರುತ್ತದೆ.

ನಾನು ಠಾಣೆಗೆ ಹೋದ ಸಮಯದಲ್ಲಿ ಫಿರ್ಯಾದಿ ಹಾಗೂ ಮೃತ ಪ್ರೇಮಕುಮಾರನ ಅಣ್ಣ ಚಾಸಾ 19 ರವರು ಅಲ್ಲಿ ಇದ್ದರು. ಮೃತ ಪ್ರೇಮಕುಮಾರನ ತಾಯಿ ಹಾಗೂ ಆತನ ಹೆಂಡತಿ ಸಹ ಅಲ್ಲಿ ಇದ್ದರು. ನನಗೆ ನೋಟೀಸ್ ನೀಡಿದ್ದ ಪೋಲೀಸರ ಹೆಸರು ಗೊತ್ತಿಲ್ಲ. ನಾನು ಆ ದಿನ ಪೋಲೀಸ್ ನಿರೀಕ್ಷಕರ ಕ್ಯಾಬೀನ್ ನಲ್ಲಿ ಸುಮಾರು ಅರ್ಧ ಗಂಟೆ ಕಾಲ ಅಲ್ಲಿ ಇದ್ದೆ. ಆಗ, ಪೋಲೀಸರು ಏನೇನು ಮಾಡಬೇಕೆಂದು ಚರ್ಚೆ ಮಾಡುತ್ತಿದ್ದರು ಎಂದರೆ ಸರಿ. ನಾವು ಆ ದಿನ ಘಟನಾ ಸ್ಥಳಕ್ಕೆ ಪಂಚನಾಮೆಗಾಗಿ ಹೋದಾಗ, ಒಟ್ಟೂ 8 ಜನ ಹೋಗಿರುತ್ತೇವೆ. ಪೋಲೀಸ್ ಠಾಣೆಯಿಂದ ಆಕಳಗವಿ ಅರಣ್ಯ ಪ್ರದೇಶಕ್ಕೆ ಎಷ್ಟು ದೂರ ಇದೆ ಎಂದು ನನಗೆ ಗೊತ್ತಿಲ್ಲ.

ನಾವು ಘಟನಾ ಸ್ಥಳಕ್ಕೆ ಕದ್ರಾ ಮೇಲಾಗಿ ಅಣಶಿ ಘಾಟ್ ಮೂಲಕ ಉಳವಿಗೆ ಹೋಗಿರುತ್ತೇವೆ. ನಾವು ಪೋಲೀಸ್ ಠಾಣೆಯಿಂದ ಘಟನಾ ಸ್ಥಳ ತಲುಪಲು 2 ತಾಸು ಆಗಿರುತ್ತದೆ. 5-6 ಪೋಲೀಸ್ ಜೀಪ್ ಗಳಲ್ಲಿ ಹಾಗೂ ವ್ಯಾನ್ ಗಳಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ನಾನು ವ್ಯಾನ್ ನಲ್ಲಿ ಹೋಗಿರುತ್ತೇನೆ. ನಾವು ಹೋಗುವ ವ್ಯಾನ್ ನ ಮುಂದುಗಡೆ 3 ಪೋಲೀಸ್ ಜೀಪ್ ಗಳು ಹಾಗೂ ಹಿಂದುಗಡೆ 2 ಪೋಲೀಸ್ ಜೀಪ್ ಗಳು ಇದ್ದವು. ಮುಂದಿನ ಜೀಪ್ ಎಲ್ಲಿ ನಿಂತಿರುತ್ತದೋ, ನಾವು ಅಲ್ಲಿ ನಿಂತಿರುತ್ತೇವೆ. ಗಾಡಿ ನಿಂತ ಸ್ಥಳದಿಂದ ಘಟನಾ ಸ್ಥಳಕ್ಕೆ ತೆರಳಲು ಸುಮಾರು 1 ತಾಸು ನಡೆದುಕೊಂಡು ಹೋಗಿರುತ್ತೇವೆ. ಘಟನಾ ಸ್ಥಳಕ್ಕೆ ಹೋದಾಗ, ಮೊದಲು ಶವವನ್ನು ಚಾಸಾ 19 ರವರು ನೋಡಿದರು. ನಾವು ಶವವನ್ನು ನೋಡಿದಾಗ, 20 ಅಡಿ ತಗ್ಗು ಪ್ರದೇಶದಲ್ಲಿ ಶವ ಬಿದ್ದಿತ್ತು. ನಾವು ಆ ದಿನ ಮಧ್ಯಾಹ್ನ 3.00 ಗಂಟೆಯವರೆಗೆ ಶವ ಬಿದ್ದ ಸ್ಥಳದಲ್ಲಿ ಇದ್ದೆವು. ನಿಪಿ 13, 16, 19, 20, 22, 23, 25 ಮತ್ತು 26 ರ ಛಾಯಾಚಿತ್ರಗಳಲ್ಲಿ ಪೋಲೀಸರು ನಮ್ಮನ್ನು ಇದೇ ರೀತಿ ನಿಲ್ಲಬೇಕು ಎಂದು ಹೇಳಿದ್ದರು ಎಂದರೆ ಸರಿ. ನಿಪಿ 13, 16, 19, 20, 22, 23, 25 ಮತ್ತು 26 ರಲ್ಲಿ ಪೋಲೀಸರು ಹೇಳಿದಂತೆ ಆರೋಪಿಗಳು ಜಾಗ ತೋರಿಸಿರುತ್ತಾರೆ ಎಂದರೆ ಸರಿ. ನಿಪಿ 11, 15, 18, 21, 24 ರ ಪಂಚನಾಮೆಗಳನ್ನು ಬರೆದ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ಅವುಗಳಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ಪೋಲೀಸರು ರುಜು ಮಾಡಲು ಹೇಳಿದ್ದರಿಂದ ಪಂಚನಾಮೆಗೆ

ನಾನು ರುಜು ಮಾಡಿರುತ್ತೇನೆ. ಪಂಚನಾಮೆಯನ್ನು ಹೀಗೆ ಬರೆಯಬೇಕು ಎಂದು ನಾನು ಪೋಲೀಸರಿಗೆ ಹೇಳಿರುವುದಿಲ್ಲ ಹಾಗೂ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

ಕೊಲೆ ಮಾಡಿದ ಸ್ಥಳದಲ್ಲಿ ರಕ್ತದ ಕಲೆಗಳು ಕಂಡುಬಂದಿಲ್ಲ, ಏಕೆಂದರೆ ಆಗ ಮಳೆ ಬೀಳುತ್ತಿತ್ತು. ಮೃತ ಪ್ರೇಮಕುಮಾರನ ಮೇಲೆ ಹಲ್ಲೆ ಮಾಡಿದ ಸ್ಥಳದಿಂದ ಅವನ ಶವ ಬಿದ್ದ ಜಾಗಕ್ಕೆ 150 ಅಡಿ ದೂರ ಇರುತ್ತದೆ. ಸದ್ರಿ ಜಾಗದಲ್ಲಿ ಯಾವುದೇ ಕುರುಹುಗಳು ಕಂಡುಬಂದಿರುವುದಿಲ್ಲ. ಸ್ಥಳಕ್ಕೆ ವೈದ್ಯರು ಬಂದಿದ್ದು, ಅಲ್ಲಿಯೇ ಮರಣೋತ್ತರ ಪರೀಕ್ಷೆ ಮಾಡಿದರು. ನಾವು ಘಟನಾ ಸ್ಥಳವನ್ನು ಬಿಟ್ಟಾಗ ಸಂಜೆ 5.30 ಗಂಟೆ ಆಗಿರುತ್ತದೆ. ನಾವು ಕಾರವಾರ ಪೋಲೀಸ್ ಠಾಣೆಗೆ ಬಂದಾಗ, ಸಂಜೆ 7.30 ಇಂದ 8.00 ಗಂಟೆ ಆಗಿತ್ತು. ಫಿರ್ಯಾದಿದಾರರು ನನಗೆ ಪರಿಚಯ ಇದ್ದು, ಒಳ್ಳೆಯ ಬಾಂಧವ್ಯ ಇದ್ದ ಕಾರಣ ಈ ಪ್ರಕರಣದಲ್ಲಿ ನಾನು ಪಂಚನಾಗಿ ಸಹಕರಿಸಿರುತ್ತೇನೆ ಎಂದರೆ ಸರಿ ಅಲ್ಲ. ಅದೇ ರೀತಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಯಾವುದೇ ಪಂಚನಾಮೆಗೆ ಹೋಗದಿದ್ದರೂ ಸಹ, ಪಂಚನಾಮೆಗೆ ಹೋಗಿರುತ್ತೇನೆ ಹಾಗೂ ಅವುಗಳಿಗೆ ರುಜು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಸಮಕ್ಷಮ 2 ಮತ್ತು 3 ನೇ ಆರೋಪಿಗಳು ಯಾವುದೇ ಘಟನಾ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳದಿದ್ದರೂ ಸಹ ಅವರು ಹೇಳಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ**

ಪೋಲೀಸರು ನನ್ನನ್ನು ಯಾವುದೇ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಛಾಯಾಚಿತ್ರ ತೆಗೆದಿಲ್ಲ ಎಂದರೆ ಸರಿ ಅಲ್ಲ. ಈ ಪ್ರಕರಣದ ಪಂಚನಾಮೆಗಳನ್ನು ಹಾಗೂ ಛಾಯಾಚಿತ್ರಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಪೋಲೀಸರೇ ಸೃಷ್ಠಿ ಮಾಡಿದ್ದಾರೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ –ಇಲ್ಲಾ–</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ